C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ - 13 ಪಿ. ಡಬ್ಲ್ಯೂ -10

ದಿನಾಂಕ : 16.02.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

| | |
|---|---|
| ಸಾಕ್ಷಿದಾರರ ಹೆಸರು | ಮೋಹನ್ ಕುಮಾರ್ |
| ತಂದೆಯ ಹೆಸರು | ಜಿ. ಟಿ. ಪುಟ್ಟಸ್ವಾಮಿ |
| ವಯಸ್ಸು | 41 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಗೆಜ್ಜಲಗೆರೆ ಗ್ರಾಮ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನನಗೆ ಚಾಸಾ-1 ರಿಂದ ಚಾಸಾ-8 ಹಾಗೂ ಮೃತ ಹೇಮಂತ್ ಕುಮಾರ್ ಗೊತ್ತು. ದಿ:11.05.2021 ರಂದು ಮೃತ ಹೇಮಂತ ಕುಮಾರನ ಶವವು ಆಸ್ಪತ್ರೆಯಲ್ಲಿದೆ ಎಂದು ಗೊತ್ತಾಯಿತು. ಹೇಮಂತ ಕುಮಾರ ಕೊಲೆಯಾಗಿರುತ್ತಾನೆ ಎಂದೂ ಸಹ ನನಗೆ ಗೊತ್ತಾಯಿತು. ನಾನು ಮಂಡ್ಯದ ಸರ್ಕಾರಿ ಆಸ್ಪತ್ರೆಗೆ ಬಂದೆನು. ಆ ಸಮಯದಲ್ಲಿ ಆಸ್ಪತ್ರೆಯಲ್ಲಿ ಪವನ್, ಅಭಿ, ರವಿ, ರಕ್ಷಿತ್, ಆನಂದ್ ಹಾಗೂ ನಮ್ಮ ಊರಿನ ಇತರೆ ಸುಮಾರು ಜನರು ಇದ್ದರು. ಶವದ ಮಹಜರಿಗೆ ಸಹಕರಿಸಿ ಎಂದು ಪೊಲೀಸರು ನನ್ನನ್ನು ಕೇಳಿದರು. ಆ ಬಗ್ಗೆ ಕೊಟ್ಟ ನೋಟೀಸಿಗೆ ನಾನು ಕೃಷ್ಣ ಹಾಗೂ ಪ್ರಕಾಶ ಸಹಿ ಮಾಡಿರುತ್ತೇವೆ. ಶವ ಪಂಚನಾಮೆಯಲ್ಲಿರುವ ಸಮನ್ಸ್ ಭಾಗದಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಶವ ಪಂಚನಾಮೆಯನ್ನು ನಿಪಿ. 45 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.45(ಎ) ಎಂದು ಗುರುತಿಸಲಾಯಿತು.

2. ಶವವನ್ನು ನೋಡಿದಾಗ ಶವದ ಮೇಲೆ 15-17 ಕೊಚ್ಚಿದ ಗಾಯಗಳು ಆಗಿದ್ದವು. ಮೃತ ದೇಹದ ಮೇಲೆ ನೀಲಿ ಬಿಳಿಯ ಟೀ ಶರಟು, ಬಿಳಿಯ ಅರ್ದ ಬನಿಯನ್, ನೀಲಿಯ ಅಂಡರು ವೇರು ಹಾಗೂ ಒಂದು ಚೆಡ್ಡಿ ಇದ್ದವು. ಸದರಿ ಬಟ್ಟೆಗಳಿಗೆ ರಕ್ತದ ಕಲೆಗಳಾಗಿದ್ದವು ಹಾಗೂ ಅವುಗಳು ಹರಿದಿದ್ದವು. ಈ ಬಗ್ಗೆ ಪೋಲಿಸರು ಅಳತೆ ಮಾಡಿ ಬರೆದು ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ. ಶವ ಪಂಚನಾಮೆಯಾದ ನಿಪಿ. 45ರ ಕಲಂ. 18 ರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.45(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಬೆಳಿಗ್ಗೆ 8.00 ರಿಂದ 11.00 ಗಂಟೆಯ ನಡುವೆ ಮಾಡಲಾಯಿತು. ಸದರಿ ಪಂಚನಾಮೆಯ ಕಾಲದಲ್ಲಿ ತೆಗೆದ

ಪೋಟೋಗಳು ಎಂದು ಸಾಕ್ಷಿಯು ನಿಪಿ.15 ರಿಂದ 29 ಪೋಟೋಗಳನ್ನು ನೋಡಿ ಗುರುಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂಒ-4 ರಿಂದ 7 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು : ಆರೋಪಿತರ ಪರವಾಗಿ ಶ್ರೀ. ಸಿ.ಪಿ. ವಕೀಲರಿಂದ :</u>

3. ಹೇಮಂತನ ಕೊಲೆಯಾದ ದಿನವೇ ಆತನ ಕೊಲೆಯಾದ ವಿಚಾರ ನನಗೆ ಗೊತ್ತಾಯಿತು. ನಾನು ಆಸ್ಪತ್ರೆಗೆ ಹೋದಾಗ ಸಮಯ ಬೆಳಿಗ್ಗೆ 7.30 ರಿಂದ 8.00 ಗಂಟೆಯಾಗಿತ್ತು. ಪೋಲಿಸರು ನೋಟೀಸನ್ನು ಬೆಳಿಗ್ಗೆ 8.00 ರಿಂದ 8.15 ರ ಸಮಯದಲ್ಲಿ ಕೊಟ್ಟರು. ಮಹಜರು ಬರೆಯುವಾಗ ಪೋಲಿಸರು ಮೃತ ಹೇಮಂತ ಕುಮಾರನನ್ನು ಕೂನೆಯದಾಗಿ ಜೀವಂತವಾಗಿ ನೋಡಿದವರು ಯಾರು ಎನ್ನುವ ಬಗ್ಗೆ ಬರೆದುಕೊಂಡರೋ ಇಲ್ಲವೋ ಎನ್ನುವುದನ್ನು ನನಗೆ ಪೋಲಿಸರು ಹೇಳಲಿಲ್ಲ. ಹೇಮಂತ ಕುಮಾರನ ಶವವನ್ನು ಮೊದಲ ಬಾರಿಗೆ ನೋಡಿದವರು ಯಾರು ಎನ್ನುವ ಬಗ್ಗೆ ಬರೆದುಕೊಂಡರೊ ಇಲ್ಲವೋ ಎನ್ನುವುದನ್ನು ನನಗೆ ಪೋಲಿಸರು ಹೇಳಲಿಲ್ಲ. ಶವ ಪಂಚನಾಮೆಯ ಕಾಲದಲ್ಲಿ ಪೊಲೀಸರು ಯಾವುದಾದರೂ ವ್ಯಕ್ತಿಯ ವಿಚಾರಣೆ ಮಾಡಿ ಹೇಳಿಕೆ ತೆಗೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ

4. ಪೊಲೀಸರು ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ನನ್ನ ಸಮಕ್ಷಮ ಮೃತ ಹೇಮಂತ ಕುಮಾರನ ಶವ ಪಂಚನಾಮೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶವ ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u> ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.